**ಸಾಕ್ಷಿಯನ್ನು ದಿಃ 03.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಕೆ ವಕೀಲರಿಂದಃ-**

ನಾನು ಬಿ.ಎ ಪದವೀಧರೆ. ನಾನು 30 ವರ್ಷಗಳಿಂದ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. 1 ನೇ ಪ್ರತಿವಾದಿಯ ಗಂಡ ಹೆಚ್. ಎ ರೇವಣ್ಣ ನನಗೆ ಮೈದುನನಾಗಬೇಕು. ಅವರು ಕೆರೆಗೆ ಬಿದ್ದು ತೀರಿಕೊಂಡಿರುತ್ತಾರೆ. ಅವರು ಕೊಡ ಪ್ರಾಥಮಿಕ ಶಾಲೆಗೆ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದರು. ಯಾವುದೆ ಆಸ್ತಿಯನ್ನು ಕರಾರು ಮಾಡಿಕೊಳ್ಳುವುದಕ್ಕಾಗಲಿ, ಖರೀದಿ ಮಾಡಿಕೊಳ್ಳುವುದಕ್ಕಾಗಲಿ ಸರ್ಕಾರದಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ಅದರಂತೆ ನಾನು ಅನುಮತಿ ಪಡೆದಿರುತ್ತೇನೆ ನ್ಯಾಯಾಲಯಕ್ಕೆ ಅನುಮತಿ ಪತ್ರವನ್ನು ಕೊಟ್ಟಿರುವುದಿಲ್ಲ. ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ನಾನು 40 ಲಕ್ಷ ರೂ. ಹಣವನ್ನು ಅಗ್ರಿಮೆಂಟ್ ಸಂಬಂಧ ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆ. ಸದರಿ 40 ಲಕ್ಷ ರೂ. ಹಣ ನನ್ನ ಬಳಿ ಇದ್ದ ಬಗ್ಗೆ ದಾಖಲೆ ಇದೆ. 2023 ನೇ ಸಾಲಿನಲ್ಲಿ ನನ್ನ ಒಟ್ಟು ವೇತನ 70 ಸಾವಿರ, ನಿವ್ವಳ ವೇತನ 75 ಸಾವಿರ ಇತ್ತು. 2023 ನೇ ಸಾಲಿನಲ್ಲಿ 2 ಲಕ್ಷ ರೂ. 40 ಸಾವಿರ ರೂ. ಕೆ.ಜಿ.ಐ.ಡಿ ಲೋನ್ ತೆಗೆದುಕೊಂಡಿದ್ದೆ. 2023 ನೇ ಸಾಲಿನಲ್ಲಿ ಬ್ಯಾಂಕ್ ನಲ್ಲಿ ನಾನು ಯಾವುದೆ ಸಾಲ ಪಡೆದಿಲ್ಲ.

25 ಲಕ್ಷ ರೂ. ಹಣವನ್ನು ಚೆಕ್ ಮೂಲಕ ರೇವಣ್ಣ ನವರ ಹೆಸರಿನಲ್ಲಿ ಕೊಟ್ಟಿದ್ದೆ. ಆ ಬಗ್ಗೆ ದಾಖಲಾತಿ ಇದೆ. ಸದರಿ ಚೆಕ್ ನಲ್ಲಿ ಯಾವ ದಿನಾಂಕ ನಮೂದಿಸಿದ್ದೆ ಎಂದು ನೆನಪಿಲ್ಲ. ಆದರೆ ಅದು 2023 ರಲ್ಲಿ ಕೆನರಾ ಬ್ಯಾಂಕ್ ಚೆಕ್ ಕೊಟ್ಟಿದ್ದೆ. ಸದರಿ ಚೆಕ್ ಅನ್ನು ರೇವಣ್ಣ ನವರಿಗೆ ಕೊಟ್ಟಿದ್ದು ಆರ್.ಟಿ.ಜಿ.ಎಸ್ ಮೂಲಕ ರೇವಣ್ಣ ನವರು ಬೇರಯವರಿಗೆ ಮಾಡಿದ್ದರು ಎನ್ನುತ್ತಾರೆ. 25 ಲಕ್ಷ ರೂ. ಹಣವನ್ನು ರೇವಣ್ಣ ನವರಿಗೆ ಕೊಟ್ಟ ಬಗ್ಗೆ ದಾಖಲೆ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೆ ತೊಂದರೆ ಇಲ್ಲ. ದಾವಾ ಆಸ್ತಿಯ ಮನೆಯನ್ನು ಹೊರತು ಪಡಿಸಿ ಪ್ರತಿವಾದಿಗೆ ಬೇರೆ ಮನೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಇರುವುದು 10-12 ಕಿ.ಮೀ ದೂರದಲ್ಲಿ ಎನ್ನುತ್ತಾರೆ. ದಾವಾ ಆಸ್ತಿ ಪ್ರತಿಷ್ಠಿತ ಬಡಾವಣೆಯಲ್ಲಿ

ಇರುವಂತಹದ್ದು ಎಂದರೆ ಸರಿ. ಸದರಿ ಮನೆಯ ಈಗಿನ ಮಾರುಕಟ್ಟೆ ಬೆಲೆ 1 –1/2 ಕೋಟಿ ಮೇಲೆ ಇದೆ ಎಂದರೆ ನನಗೆ ಗೊತ್ತಿಲ್ಲ.

ರೇವಣ್ಣ ನವರು ತೀರಿಕೊಂಡು ದಿಃ 08.08.2023 ಆಗಿರುತ್ತದೆ. ಹೂಟಗಳ್ಳಿಯಲ್ಲಿ ಇದ್ದ ಹೌಸಿಂಗ್ ಬೋರ್ಡ ಮನೆಯನ್ನು ಮಾರಾಟ ಮಾಡಿ ಟಾಟಾ ಕ್ಯಾಪಿಟಲ್ ಫೈನಾನ್ಸ್ ಇದ್ದ ಲೋನ್ ಕೊಟ್ಟು, ಉಳಿದ ಹಣವನ್ನು ಬ್ಯಾಂಕ್ ನಲ್ಲಿ ಇಟ್ಟಿದ್ದೆ. 65 ಲಕ್ಷ ರೂ.ಗಳಿಗೆ ಸದರಿ ಮನೆಯನ್ನು ಮಾರಾಟ ಮಾಡಿದ್ದೆ. ಆ ಬಗ್ಗೆ ದಾಖಲೆ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೆ ತೊಂದರೆ ಇಲ್ಲ. ನನಗೆ ನಗರ ಪ್ರದೇಶದಲ್ಲಿ ಯಾವುದೆ ಮನೆ ಇರುವುದಿಲ್ಲ, ಹಳ್ಳಿಯಲ್ಲಿ ಮನೆ ಇದೆ. ಮಾರಾಟ ಮಾಡಿದಂತಹ ಹೂಟಗಳ್ಳಿಯಲ್ಲಿ ಇದ್ದ ಮನೆ 2 ಪ್ಲೋರ್ ಇತ್ತು ಎಂದರೆ ಸರಿ. 15 ಲಕ್ಷ ರೂ. ನಗದಾಗಿ ಕೊಟ್ಟ ಹಣವನ್ನು ದಿಃ 31.01.2023 ರಂದು ಬ್ಯಾಂಕ್ ನಿಂದ ಹಿಂಪಡೆದಿದ್ದೆ. ನಗದಾಗಿ ಕೊಡುವ ಮೊದಲು ಚೆಕ್ ಮೂಲಕ ಕೂಡಲು ಯಾವುದಾರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರು ನಗದಾಗಿ ಹಣ ಬೇಕು ಎಂದು ಕೇಳಿದ್ದರು ಎನ್ನುತ್ತಾರೆ. ನನ್ನ ಮೈದುನ ಮಧ್ಯಪಾನ ಮಾಡಿಕೊಂಡು ಅಲ್ಲಲ್ಲಿ ಸುತ್ತಾಡಿಕೊಂಡು ಇದ್ದರು ಎಂದರೆ ಆ ಬಗ್ಗೆ ಗೊತ್ತಿಲ್ಲ, ಆದರೆ ಅವರು ಕೆಲಸಕ್ಕೆ ಹೋಗುತ್ತಿದ್ದರು.

ದಾವಾ ಅಸ್ತಿ 3 ಪ್ಲೋರ್ ಇರುತ್ತದೆ. ಟಾಟಾ ಕ್ಯಾಪಿಟಲ್ ಫೈನಾನ್ಸ್ ನಲ್ಲಿ ದಾವಾ ಸ್ವತ್ತಿನ ಮೇಲೆ 29 ಲಕ್ಷ ಲೋನ್ ಇದೆ ಎಂದರೆ ಮಾಲೀಕರು ಆ ಬಗ್ಗೆ ಹೇಳಿಲ್ಲ ಎನ್ನುತ್ತಾರೆ. ಕರಾರು ಪತ್ರದ ಮಾಡಿಕೊಳ್ಳು ಕಾಲಕ್ಕೆ ದಾವಾ ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ ಕೊಟ್ಟಿದ್ದರು ಎಂದರೆ ಸರಿ. ಆ ಸಮಯದಲ್ಲಿ ಯಾವುದೆ ಋಣಭಾರಗಳು ಇರಲಿಲ್ಲ. ಸಾಕ್ಷಿ ಪುನಃ ಇ.ಸಿ ತಗೆದುಕೊಂಡಿದ್ದು, ಅದರಲ್ಲಿ ಎಂ.ಎನ್ ಮಂಜುನಾಥ ರವರ ಹೆಸರು ಇತ್ತು. ಸಾಕ್ಷಿ ಪುನಃ ರೇವಣ್ಣ ರವರು ಸದರಿ ರವರಿಗೆ ಹಣ ಕೊಡಬೇಕಾಗಿದ್ದು, ದಾವಾ ಆಸ್ತಿಯನ್ನು ಅಡಮಾನ ಮಾಡಿದ ಕಾರಣ ಅವರ ಹೆಸರು ಇತ್ತು ಎನ್ನುತ್ತಾರೆ. ಸಾಕ್ಷಿ ಪುನಃ ಸದರಿ ಮಂಜುನಾಥ ರವರಿಗೆ ಹಣ ಕೊಡಬೇಕೆಂದು ರೇವಣ್ಣ ನವರು ನನ್ನ ಬಳಿ ಹಣ ಪಡೆದಿದ್ದರು ಎನ್ನುತ್ತಾರೆ. ಮಂಜುನಾಥ ರವರ ಹೆಸರು

ಇದ್ದದ್ದನ್ನು ರಿಜಿಸ್ಟರ್ ಪತ್ರದಲ್ಲಿ ಕ್ಯಾನ್ಸಲ್ ಮಾಡಿದ ಬಗ್ಗೆ ನನ್ನ ಗಮನಕ್ಕೆ ಇದೆ. ಸೇಲ್ ಅಗ್ರಿಮೆಂಟ್ ಮಾಡಿದ ದಿನವೇ ಕ್ಯಾನ್ಸಲ್ ಮಾಡಿದ್ದರು ಎನ್ನುತ್ತಾರೆ. ಹಾಗೆ ಕ್ಯಾನ್ಸಲ್ ಮಾಡಿದ ಬಗ್ಗೆ ಇ.ಸಿ ಇರುತ್ತದೆ, ಪತ್ರ ನನ್ನ ಬಳಿ ಇರುವುದಿಲ್ಲ. ಮಂಜುನಾಥ ರವರ ಹೆಸರಿನಲ್ಲಿದ್ದ ಪತ್ರವನ್ನು ರದ್ದು ಪಡಿಸಿದ ಪತ್ರ ನನ್ನ ಬಳಿ ಇರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.